ಯುದ್ಧ ವಿರೋಧಿ ಶಾಂತಿ ಗೀತೆಗಳು

ಸವಿತಾ ನಾಗಭೂಷಣ

ಹೂವು ಹಣ್ಣು ಬೆಳೆದು ಕೊಟ್ಟೆವು
ಸಿರಿಧಾನ್ಯಗಳ ಬೆಳೆದು ಕೊಟ್ಟೆವು
ಒಡವೆ ವಸ್ತ್ರಜೀವ ಉಳಿಸುವ
ಔಷಧಗಳ ತುಂಬಿಕೊಟ್ಟೆವು

ಪಡೆದದ್ದೇನು?
ಮದ್ದುಗುಂಡು ಫಿರಂಗಿಗಳು
ಯುದ್ಧ ವಿಮಾನಗಳು
ಅಸ್ತ್ರ ಶಸ್ತ್ರಾಸ್ತ್ರಗಳು

ವೇಗಕ್ಕೆ ಸೋತೆವು
ಭೋಗಕ್ಕೆ ಸೋತೆವು
ನಡ ಬಗ್ಗಿಸಿದೆವು

ಎದೆ ಸೆಟಿಸಿ ನಿಲ್ಲುವುದು
ಅಷ್ಟು ಸುಲಭಅಲ್ಲ
ಅದುತ್ಯಾಗವ ಬೇಡುವುದು
ಸಿದ್ಧನಾಗುವುದು ಬುದ್ಧನಾಗುವುದು
ಅಷ್ಟು ಸುಲಭಅಲ್ಲ
ಅದುತ್ಯಾಗವ ಬೇಡುವುದು

ಚಿಕ್ಕಗೌಡ್ರ ನಾಗನಗೌಡ-ಶಿವಮ್ಮ ದತ್ತಿ ೨೫ನೇ ಪ್ರಕಟಣೆ

ಯುದ್ಧ ವಿರೋಧಿ
ಶಾಂತಿ ಗೀತೆಗಳು

ಸವಿತಾ ನಾಗಭೂಷಣ

ಲೋಹಿಯಾ ಪ್ರಕಾಶನ
ಬಳ್ಳಾರಿ

YUDHA VIRODHI SHANTHI GEETHEGALU

A collection of Poems by
Savitha Nagabhushana
Hig-5, "Nudi" Kallahalli,
Vinobanagara, Shivamogga - 577 204
Cell : 9481351079

Published by
LOHIYA PRAKASHANA
'Kshitija' Kappagallu Road
Gandhi Nagar, Ballari - 583 103
Tel: 08392 - 257412
Cell : 9900750549

FIRST IMPRESSION : 2000 Copies
COPY RIGHT : AUTHOR
PAGES : 40
PRICE : Rs. 30
ISBN : 978-81-87731-70-2
COVER PAGE: SUDHAKAR DARBE
PRINTED AT :
VISHWAS PRINTS
Bangalore

ಯುದ್ಧ ವಿರೋಧಿ ಶಾಂತಿ ಗೀತೆಗಳು
ಲೇಖಕರು : **ಸವಿತಾ ನಾಗಭೂಷಣ**
ಮೊದಲ ಮುದ್ರಣ : ೨೦೨೫
ಪ್ರತಿಗಳು : ೨೦೦೦
ಬೆಲೆ : ೩೦
ಪುಟಗಳು : ೪೦
ಪ್ರಕಾಶಕರು :
ಲೋಹಿಯಾ ಪ್ರಕಾಶನ
'ಕ್ಷಿತಿಜ' ಕಪ್ಪಗಲ್ಲು ರಸ್ತೆ, ಗಾಂಧಿನಗರ
ಬಳ್ಳಾರಿ – ೫೮೩ ೧೦೩

ವಿಶ್ವಾಸ್ ಪ್ರಿಂಟ್ಸ್
VISHWAS PRINTS
ಬೆಂಗಳೂರು-560 061.

ಮೊದಲ ಮಾತು : ಶಾಂತಿ ನೆಲೆಸಿತ್ತು !

ನಗರದ ತುಂಬಾ ರಕ್ತ ಮಾಂಸ ಚೆಲ್ಲಾಡಿದ್ದವು
ನಗರದ ತುಂಬಾ ಮದ್ದು-ಗುಂಡುಗಳು
ಚೆಲ್ಲಾಡಿದ್ದವು. ಸಾವಿರಾರು ಜನ ಹತರಾಗಿದ್ದರು

ಹೆಜ್ಜೆ ಹೆಜ್ಜೆಗೂ ಕುಂಟರು ಕುರುಡರು ಮೂಗರು
ಎಲ್ಲೆಡೆ ಗಾಯಾಳುಗಳು
ಬದುಕುಳಿದವರು ಅಳಲಾಗದಷ್ಟು ನಿತ್ರಾಣಗೊಂಡಿದ್ದರು
ಚಿಂದಿಚಿಂದಿಯಾಗಿದ್ದರು

ಯಾರ ಮನೆಯ ಒಲೆಯಲ್ಲೂ ಬೆಂಕಿ ಇರಲಿಲ್ಲ
ಮನೆಮನೆಯ ದೀಪವೂ ಆರಿಹೋಗಿತ್ತು
ಕತ್ತಲೋ ಕತ್ತಲು......
ಚಂದ್ರನ ಬೆಳಕು ಎಲ್ಲವ ವಿವರಿಸುತ್ತಿತ್ತು
ಶಾಂತಿ ನೆಲೆಸಿತ್ತು!

-ಸವಿತಾ ನಾಗಭೂಷಣ
ದೂ: ೯೪೮೧೩೫೧೦೭೯

ಕೃತಜ್ಞತೆಗಳು

ಸದಾ ನನ್ನೊಂದಿಗಿರುವ ಸಂಗಾತಿ ಡಿ.ಎಸ್. ನಾಗಭೂಷಣ ಇವರಿಗೆ–

ಸದಾ ಒಳ್ಳೆಯ ಮಾತುಗಳನ್ನಾಡಿ ಪ್ರೋತ್ಸಾಹಿಸುವ ಎಲ್ಲ ಗೆಳೆಯ–ಗೆಳತಿಯರಿಗೆ–

ಪತ್ರಿಕೆಗಳಲ್ಲಿ / ಫೇಸ್ ಬುಕ್ / ವಾಟ್ಸಾಪ್‌ಗಳಲ್ಲಿ ಓದಿ ಮಿಡಿದ ಅಸಂಖ್ಯ ಓದುಗರಿಗೆ, ಬಂಧು–ಬಳಗಕ್ಕೆ–

ಇಲ್ಲಿನ ಅನೇಕ ಕವನಗಳನ್ನು 'ಹೊಸತು' ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಿದ ಅದರ ಸಂಪಾದಕರಾದ ಶ್ರೀ ಸಿದ್ಧನಗೌಡ ಪಾಟೀಲ ಅವರಿಗೆ–

ಮುಖಪುಟ ವಿನ್ಯಾಸ ಮಾಡಿಕೊಟ್ಟಿರುವ ಶ್ರೀಸುಧಾಕರ ದರ್ಬೆ ಇವರಿಗೆ–

ಅಂದವಾಗಿ ಮುದ್ರಿಸಿಕೊಟ್ಟಿರುವ ವಿಶ್ವಾಸ್ ಪ್ರಿಂಟ್ಸ್ ಮತ್ತವರ ಸಿಬ್ಬಂದಿ ವರ್ಗಕ್ಕೆ–

ನನ್ನ ಕೃತಜ್ಞತೆಗಳು.

ಚಿಂತನಶೀಲ ಹೊತ್ತಗೆಗಳನ್ನು ತಮ್ಮ ಲೋಹಿಯಾ ಪ್ರಕಾಶನದ ಮೂಲಕ ಒಂದು ವ್ರತದಂತೆ ಪ್ರಕಟಿಸುತ್ತಾ ಆ ಮೂಲಕ ಕನ್ನಡಿಗರ ಮನಸ್ಸನ್ನು ವಿಸ್ತರಿಸುತ್ತಾ ಬಂದಿರುವ ಹಿರಿಯ ಸಮಾಜವಾದಿ ಮಿತ್ರರಾದ ಬಳ್ಳಾರಿಯ ಲೋಹಿಯಾ ಪ್ರಕಾಶನದ ಶ್ರೀ ಸಿ.ಚನ್ನಬಸವಣ್ಣ ಅವರು ಈ ಕೃತಿಯನ್ನು ತಮ್ಮ ತಂದೆ–ತಾಯಿಯವರ ನೆನಪಿನ ದತ್ತಿಮಾಲೆಯಲ್ಲಿ ಪ್ರಕಟಿಸಲು ಒಪ್ಪಿರುವರು. ಅವರ ಪ್ರೀತಿಗೆ ನಾನು ಋಣಿಯಾಗಿದ್ದೇನೆ.

– ಸವಿತಾ ನಾಗಭೂಷಣ

ಪ್ರಕಾಶಕರ ಮಾತು

ಈಗ ನಾವು ಪ್ರಕಟಿಸುತ್ತಿರುವ ಕನ್ನಡದ ಪ್ರಮುಖ ಕವಿಗಳಲ್ಲೊಬ್ಬರಾಗಿರುವ ಸವಿತಾ ನಾಗಭೂಷಣ ಅವರ ಯುದ್ಧ ವಿರೋಧಿ ಶಾಂತಿಗೀತೆಗಳು ಕವನಸಂಕಲನ ನಮ್ಮ ತಂದೆ-ತಾಯಿ ದತ್ತಿ ಮಾಲಿಕೆಯ ೨೫ನೇ ಕೃತಿ. ಮಾನವೀಯ ಕಾಳಜಿಯುಳ್ಳ, ತಾಯಿ ಹೃದಯದ ಕವಿ ಸವಿತಾ ಅವರ ಈ ಸಂಕಲನವನ್ನು ಪ್ರಕಟಿಸಲು ಸಂತೋಷವೆನಿಸುತ್ತದೆ. ಏಕೆಂದರೆ ನಾಲ್ಕು ವರ್ಷಗಳ ಹಿಂದೆ ನಡೆದ ರೈತ ಹೋರಾಟ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದ ಹೋರಾಟಗಳಲ್ಲಿ ಅತ್ಯಂತ ಮುಖ್ಯ ಹೋರಾಟವಾಗಿ ಕಲ್ಲು ಹೃದಯದ ಕೇಂದ್ರ ಸರ್ಕಾರವನ್ನು ಮಣಿಸಿದ್ದು ಈಗ ಇತಿಹಾಸ. ಆ ಸಮಯದಲ್ಲಿ ರೈತರ ಸಂಕಷ್ಟಗಳನ್ನು ಕಂಡು ಮಮ್ಮಲಮರುಗಿ ಸವಿತಾ ಅವರು ರೈತ ಗೀತೆಗಳನ್ನು ರಚಿಸಿಕೊಟ್ಟರು. ಆ ಗೀತೆಗಳ ಗುಚ್ಛವೇ 'ಕಡೇ ಮಾತು' ಸಂಕಲನ. ನಾವು ಪ್ರಕಟಿಸಿದ ಸಂಕಲನವನ್ನು ಕನ್ನಡದ ಓದುಗರು ಬಹುವಾಗಿ ಮೆಚ್ಚಿದರು. ಈಗ ವಿಶ್ವದೆಲ್ಲೆಡೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿ ಅತೀವ ಖೇದದಿಂದ 'ಯುದ್ಧ ವಿರೋಧಿ ಶಾಂತಿಗೀತೆಗಳು' ಇದನ್ನು ರಚಿಸಿಕೊಟ್ಟಿದ್ದಾರೆ. ಕವಿಯ ಮೂಲ ಗುಣವೇ ಆರ್ದ್ರತೆ ಹಾಗೂ ಅಂತಃಕರಣ ವಲ್ಲವೇ.

ಲೋಹಿಯಾ ಪ್ರಕಾಶನದಿಂದ ಈ ಹಿಂದೆ ಪ್ರಕಟವಾದ ಡಾ. ಸರಜೂ ಕಾಟ್ಕರ್ ಅವರ 'ಬಾಂಬ್ ವಿರೋಧಿ ಪಾಕೀಸ್ತಾನೀ ಕವಿತೆಗಳು' ಮತ್ತು 'ಗಾಂಧಿ ಟು ಗೋದ್ರಾ' ಹಾಗೂ ಎಂ.ಡಿ. ವಕ್ಕುಂದ ಅವರ 'ಮಗು ಮಲಗಿದೆ ಎದೆಯ ಮೇಲೆ' ಸಂಕಲನಗಳನ್ನು ಕನ್ನಡದ ಓದುಗರು ಮೆಚ್ಚಿ ಸ್ವೀಕರಿಸಿದ್ದಾರೆ. ಈ ಸಂಕಲನಗಳು ಯುದ್ಧ, ಬಾಂಬ್, ಹಿಂಸೆ ಹಾಗೂ ಭೀಬತ್ಸತೆಗಳನ್ನು ಕುರಿತ ರಚನೆಗಳಾಗಿದ್ದು ಅದರಿಂದ ಮನುಕುಲಕ್ಕಾದ ಅಪಾಯಗಳನ್ನು ಎತ್ತಿ ತೋರಿಸಿದ್ದವು.

ಲೋಹಿಯಾರ ಆಶಯಗಳನ್ನು ಸಾಹಿತ್ಯದ ಮೂಲಕ ಜನರಿಗೆ ತಲುಪಿಸುವ ಕೆಲಸವನ್ನು ಪ್ರಕಾಶನ ತನ್ನ ಇತಿಮಿತಿಯಲ್ಲಿ ಮಾಡುತ್ತಿದೆ. ಮೌಲಿಕ/ವೈಚಾರಿಕ ಪುಸ್ತಕಗಳು ಸುಲಭ ಬೆಲೆಗೆ, ನೇರವಾಗಿ, ವ್ಯಾಪಕವಾಗಿ ಓದುಗರಿಗೆ ತಲುಪಬೇಕೆಂಬುದು ಪ್ರಕಾಶನದ ಆಶಯ. ಆಶಯ ಸಾಕರಗೊಳ್ಳಲು ನಾಡಿನ ಸಮಾನ ಮನಸ್ಕ ಗೆಳೆಯರು ನೆರವಾಗಿದ್ದಾರೆ. ಈ ಸಮಷ್ಟಿ ಪ್ರಜ್ಞೆಯ ಕಾರಣದಿಂದಾಗಿಯೇ ಕಳೆದ ಮೂರು ದಶಕಗಳಲ್ಲಿ, ವಿಶೇಷತಃ ನಮ್ಮ ತಂದೆ ತಾಯಿ ದತ್ತಿಯ ಪುಸ್ತಕಗಳ ಸುಮಾರು ಎರಡೂವರೆ ಲಕ್ಷ ಪ್ರತಿಗಳನ್ನು ಓದುಗರ ಮನೆ-ಮನಕ್ಕೆ ತಲುಪಿಸಿದ ಹೆಮ್ಮೆ ಪ್ರಕಾಶನಕ್ಕಿದೆ. ಪುಸ್ತಕ-ಸಂಸ್ಕೃತಿಯ ಪ್ರತೀಕ

ಎಂದು ಪರಿಭಾವಿಸಿರುವ ಪ್ರಕಾಶನಕ್ಕೆ, ಪುಸ್ತಕ ಸರಕಲ್ಲ, ಉದ್ದಿಮೆಯೂ ಅಲ್ಲ. ಆದರೆ ಕೇಂದ್ರ ಸರಕಾರವು ಮೂರು ತಿಂಗಳ ಹಿಂದೆ ಇದ್ದಕ್ಕಿದ್ದ ಹಾಗೆ ಅಂಚೆ ಇಲಾಖೆಯಲ್ಲಿ ಹಿಂದಿನಿಂದಲೂ ಚಾಲ್ತಿಯಲ್ಲಿದ್ದ ಪುಸ್ತಕ ಸ್ನೇಹಿ ವ್ಯವಸ್ಥೆಯಾಗಿದ್ದ **'ಮುದ್ರಿತ ಪುಸ್ತಕ'** (Printed Book) ಸೇವೆಯನ್ನೇ ರದ್ದುಪಡಿಸಿದೆ. ಅದರಿಂದಾಗಿ ಉದಾ : ಈಗ ಒಂದು ನೂರು ಗ್ರಾಂ ತೂಕದ ಪುಸ್ತಕ ಕಳಿಸಲು ಕನಿಷ್ಟ ರೂ. ೪೨- ಭರಿಸಬೇಕಾಗಿದೆ. ಸಾಮಾನ್ಯ ಬುಕ್ ಪೋಸ್ಟ್‌ನಲ್ಲಿ ಕಳಿಸಲು ರೂ. ೭/- ಭರಿಸಬೇಕಾಗಿದೆ (ಮೊದಲು ಕ್ರಮವಾಗಿ ರೂ. ೧೮/- ಹಾಗೂ ರೂ. ೧/- ಆಗುತ್ತಿತ್ತು) ನಮ್ಮ ಪ್ರಕಾಶನದ ಪುಸ್ತಕಗಳ ಬೆಲೆಯೇ ಓದುಗ ಸ್ನೇಹಿ ೩೦-೫೦ ಇರುವಾಗ ೪೨ ಭರಿಸಿ ಬದುಕುವುದಾದರೂ ಹೇಗೆ? ಪುಸ್ತಕದ ಬೆಲೆ ಹೆಚ್ಚಿಸಿ ಓದುಗರಿಗೆ ಹೊರೆ ಮಾಡುವಂತಿಲ್ಲ. ಏಕೆಂದರೆ ಪುಸ್ತಕ ಸಂಸ್ಕೃತಿಯ ಪ್ರತೀಕ. ಮೊದಲೇ ದಿನೇ ದಿನೇ ಓದುಗರ ಸಂಖ್ಯೆ ಕ್ಷಯಿಸುತ್ತಿದೆ.

ಕಳೆದ ನಾಲ್ಕು ದಶಕದಿಂದ ಈ ಅಕ್ಷರ ಜೋಡಿಸುವ ಕೈಂಕರ್ಯ ಧನ್ಯತೆಯನ್ನು ಕೊಟ್ಟಿದೆ. ಆ ಧನ್ಯತೆ, ಪ್ರೀತಿಯೇ ನಮಗೆ ದೊರಕುತ್ತಿರುವ ಲಾಭ. ಆ ಪ್ರೀತಿಗಾಗಿ ಅಕ್ಷರ ಜೋಡಿಸುತ್ತಲೇ ಇರಬೇಕೆಂಬುದು ನಮ್ಮ ಇರಾದೆ. ಆದರೆ ಈ ದುರ್ದಿನಗಳಲ್ಲಿ ತುಂಬ ಕಷ್ಟ. ಲೇಖಕರು, ಪ್ರಕಾಶಕರು, ಮುದ್ರಕರು ಹಾಗೂ ಓದುಗರು ಒಗ್ಗೂಡಿ ಒಂದು ಜನಾಂದೋಲನದ ಮೂಲಕ ಪರಿಹಾರ ಪಡೆದುಕೊಳ್ಳಬಹುದು. ಆ ದಿನಗಳು ಆದಷ್ಟು ಬೇಗ ಬರಲೆಂದು ಆಶಿಸುತ್ತೇವೆ.

ಸಂಕಲನ ಪ್ರಕಟಿಸಲು ಅನುವು ಮಾಡಿಕೊಟ್ಟ ಶ್ರೀಮತಿ ಸವಿತಾ ನಾಗಭೂಷಣ ಅವರಿಗೆ - ಅರ್ಥಪೂರ್ಣವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಬೆಯವರಿಗೆ - ಎಂದಿನಂತೆ ಅಚ್ಚುಕಟ್ಟಾಗಿ ಮುದ್ರಣ ಮಾಡಿಕೊಟ್ಟ ವಿಶ್ವಾಸ್ ಪ್ರಿಂಟರ್ಸ್‌ನ ಶ್ರೀ ಟಿ.ಎಲ್. ವೆಂಕಟೇಶ್ ಹಾಗೂ ಸಿಬ್ಬಂದಿ ವರ್ಗಕ್ಕೆ - ಎಲ್ಲಕ್ಕಿಂತ ಮಿಗಿಲಾಗಿ ಕೊಂಡು ಓದಿ ಬೆಂಬಲಿಸುತ್ತಿರುವ ಕನ್ನಡದ ಓದುಗರಿಗೆ ನಮ್ಮ ನಮನಗಳು.

ಪ್ರಕಾಶನದ ಪರವಾಗಿ
ಸಿ. ಚನ್ನಬಸವಣ್ಣ

ಪರಿವಿಡಿ

೧. ದೊರೆಗೆ ಜಯವಾಗಲಿ ! ೯
೨. ಬೀದಿಯಲ್ಲಿ ಚೆಲ್ಲಬಾರದು ೧೦
೩. ದ್ವೇಷವನ್ನು ಬಿತ್ತಬಾರದು ೧೧
೪. ಕಣ್ಣೀರು ಕಾದು ಬರುವುದೆ? ೧೨
೫. ನೆರೆಮನೆಯವನ ದುಃಖ ೧೩
೬. ಬಲಾಢ್ಯರು ೧೪
೭. ಯಮದೂತರು ೧೫
೮. ನನ್ನ ಮನೆ ೧೬
೯. ಹೊಸಹುಟ್ಟು ೧೭
೧೦. ಯುದ್ಧವಾದರೆ..... ೧೮
೧೧. ಹೊಸಬಾಳು ೧೯
೧೨. ಫಲಿತಾಂಶ ೨೦
೧೩. ಶಾಂತಿ ಬಯಸಿ.... ೨೧
೧೪. ವಿಜಯ ಸ್ತಂಭ ೨೨
೧೫. ಹಾರೈಸುತ್ತಿತ್ತು ೨೩
೧೬. ಕಾದಾಟ ೨೪
೧೭. ಕ್ಷಮಿಸಿ ೨೫
೧೮. ಬೇಡ ಯುದ್ಧ ೨೬
೧೯. ಯುದ್ಧ ಕೈದಿಗಳು ೨೭
೨೦. ಬಿಳಿಯ ಪಾರಿವಾಳ ೨೮
೨೧. ಏಕವಾಗಿ ೨೯
೨೨. ಬಾಂಬು ೩೦

೨೩. ಕಣ್ಣ ಬೆಳಕು ೩೧
೨೪. ನುಡಿಯಲಿಲ್ಲ ನಾಲಿಗೆ ೩೨
೨೫. ಯುದ್ಧಕ್ಕೆ ಗುಡ್ ಬೈ ೩೩
೨೬. ಯುದ್ಧ ೩೪
೨೭. ಕದನವಿರಾಮ ೩೫
೨೮. ಕರಗುವುದು ಕಲ್ಲೆದೆ ೩೭
೨೯. ಚೌಕದಲ್ಲಿ ಕವಿತೆ ೩೮
೩೦. ಒಪ್ಪಂದ ೩೯

೧. ದೊರೆಗೆ ಜಯವಾಗಲಿ !

ಅಯ್ಯೋ ಸೈರನ್ ಮೊಳಗಿದೆ
ಬೆಂಕಿ ಬಿದ್ದಿದೆ ಹಗೆ-ಹೊಗೆ
ಧೂಳು ಎದ್ದಿದೆ

ಅದೆಷ್ಟೋ ದೂರದಿಂದ
ನಡೆದು ಬಂದಿರುವೆ
ನಿಮಗೆ ನೀಡಲೆಂದು
ಉಡುಗೊರೆ ತಂದಿರುವೆ

ಬೆಂದು ಮುದ್ದೆಯಾದ
ನನ್ನೀ ಹಸುಗೂಸ
ತಟ್ಟೆಯಲ್ಲಿಟ್ಟು ನೀಡುತಿರುವೆ

ಇಗೊಳ್ಳಿ ಇದನ್ನೇ
ಒಪ್ಪಿಸಿಕೊಳ್ಳಿ ಹೂಗುಚ್ಛದಂತೆ

(೨೦೨೩)

೨. ಬೀದಿಯಲ್ಲಿ ಚೆಲ್ಲಬಾರದು

ಎಷ್ಟೊಂದು ಹೂ ಗುಚ್ಚಗಳು
ಎಷ್ಟೊಂದು ಶವಪೆಟ್ಟಿಗೆಗಳು

ಎಷ್ಟೊಂದು ಜಯಕಾರಗಳು
ಎಷ್ಟೊಂದು ಕುಶಾಲು ತೋಪುಗಳು

ವೀರರೇಕೆ ಸಾಯಬೇಕು?
ಧೀರರೇಕೆ ಸಾಯಬೇಕು?

ಶಾಂತಿಕಾಲದಲ್ಲಿ ಸೇತುವೆ ಕಟ್ಟಿದವರು
ಯುದ್ಧಕಾಲದಲ್ಲಿ ಉಡಾಯಿಸುವರು

ಹೌದು ರಕ್ತ ದೇಹದಲ್ಲಿ ಹರಿಯಬೇಕು
ಬೀದಿಯಲ್ಲಿ ಚೆಲ್ಲಬಾರದು

(೨೦೧೮)

೩. ದ್ವೇಷವನ್ನು ಬಿತ್ತಬಾರದು

ದ್ವೇಷವನ್ನು ಬಿತ್ತಿ ಬೆಳೆದು
ತಲೆಯನೆತ್ತಿ ಕತ್ತಿಯಂತೆ
ತೂಗಲು ಬಿಟ್ಟು ನೀರು ಗೊಬ್ಬರ ಕೊಟ್ಟು
ಭರ್ರೋ ಎಂದು ಬೆಳೆದು
ರೆಂಬೆ ಗೊಂಬೆ ಚಾಚಿ
ವಿಷದ ಹಣ್ಣು ತೂಗಿ ಆಸೆಗಣ್ಣು ತಾಗಿ
ಮಂದಿ ತಿಂದು ತೇಗಿ
ಮೈ ತಣ್ಣಗಾಗಿ ಕಣ್ಣ ಮುಚ್ಚಿ
ಮಣ್ಣು ಸೇರಬಾರದು

ಸುಟ್ಟು ಬಿಡು ಮೊಳಕೆಯಲ್ಲೇ
ಸಣ್ಣ ಬೆಂಕಿಯಲ್ಲಿ
ಹಗೆಯ ಹೊಗೆ ಕೂಡ ಹಬ್ಬಬಾರದು

(೨೦೧೮)

೪. ಕಣ್ಣೀರು ಕಾದು ಬರುವುದೆ?

ದೊರೆ.....
ಗಿಡಮರ ಪಶುಪಕ್ಷಿ
ನಾಯಿ ಬೆಕ್ಕು ದನಕರುಗಳಿಗಾಗಿ
ಅತ್ತವಳು ನಾನು
ಈಗ ಸತ್ತಂತೆ ಹೇಗೆ ಸುಮ್ಮನಿರಲಿ?

ಮನುಷ್ಯರಿಗಾಗಿ ಅಳುತ್ತಿರುವೆ
ಕಣ್ಣೀರು ಕಾದು ಬರುವುದೆ?
ಎಲ್ಲರೊಳಗಿದೆ ಮಿಡಿಯುವ ಹೃದಯ
ನಿನ್ನಲ್ಲೂ ....

(೨೦೨೩)

೫. ನೆರೆಮನೆಯವನ ದುಃಖ

ಉಕ್ರೇನವೇ ಫೆಲಸ್ತಿನವೇ
ಯುದ್ಧವೇ ಸಂಘರ್ಷವೇ
ಇಲ್ಲ ಗೊತ್ತಿಲ್ಲ!
ಜಗತ್ತಿನ ಸಂಪರ್ಕ ಕಡಿದು
ವರುಷಗಳಾದವು ಗೊತ್ತಿಲ್ಲ!

ಇದ್ದನೊಬ್ಬ ಮಗ
ಎಲ್ಲಿರುವನೋ ಹೇಗಿರುವನೋ
ಇರುವನೋ? ಇಲ್ಲವೋ?
ಬರೀ ದುಃಖ ದುಃಖ

ರಾಜನಿಗೆ ನೂರಾ ಐವತ್ತು
ಕೋಟಿ ಮಕ್ಕಳು
ಒಬ್ಬಿಬ್ಬ ಹತವಾದರೆ ಗತನಾದರೆ
ತಡೆದುಕೊಳ್ಳಬಲ್ಲ ಉಳಿದುಕೊಳ್ಳಬಲ್ಲ

ನಾನೊಬ್ಬ ಸಾಮಾನ್ಯ ಪ್ರಜೆ
ಒಬ್ಬನೇ ಮಗ ಎಲ್ಲಿರುವನೋ?
ಹೇಗಿರುವನೋ? ಇರುವನೋ?
ಬರೀ ದುಃಖ ದುಃಖ

(೨೦೨೩)

೬. ಬಲಾಢ್ಯರು

ಬಲಾಢ್ಯರು ಇವರು
ವಿಶೇಷ ಜನರು
ಇಡೀ ಜಗತ್ತಿಗೆ ಒಡೆಯರು

ಕೆಲವರ ಬೆಂಬಲಕ್ಕೆ ನಿಲ್ಲುವರು
ಹಲವರ ಅಂಚಿಗೂ ತಳ್ಳುವರು

ಬಯಸಿದರೆ ಸಗ್ಗವನ್ನೇ
ಭುವಿಗೆ ತಂದಿಳಿಸುವರು
ಇಲ್ಲ, ನರಕವ ಸೃಷ್ಟಿಸುವರು

ಇತ್ತ ಶಸ್ತ್ರಾಸ್ತ್ರವ ನೀಡುವರು
ಅತ್ತ ಗಾಯಾಳುಗಳಿಗೆ
ಮುಲಾಮು ಹಚ್ಚುವರು

ಶಸ್ತ್ರಾಗಾರ ಕೆಲವರಿಗೆ
ಶವಾಗಾರ ಇತರರಿಗೆ

ಎಲ್ಲರೂ ಅಂಕೆಯಲ್ಲಿರಬೇಕು
ಇಲ್ಲ ಶಂಕೆಗೊಳಪಡಬೇಕು

ಭುವಿಯನ್ನಾಳುವುದು
ಇವರ ಆಜನ್ಮಸಿದ್ಧ ಹಕ್ಕು
ಇಡೀ ಜಗತ್ತು ಇವರ ತುತ್ತು!

(೨೦೨೩)

೭. ಯಮದೂತರು

ನೀವು ಯಾರನ್ನು ರಕ್ಷಿಸುತ್ತಿದ್ದೀರಿ?
ಯಾರನ್ನು ಶಿಕ್ಷಿಸುತ್ತಿದ್ದೀರಿ?

ನಾವು ಅಸಹಾಯಕ ಅಮಾಯಕ
ಹೆಂಗಸರು ಮತ್ತು ಮಕ್ಕಳು
ನಿಷ್ಪಾಪಿ ನಿರಾಯುಧರು

ಮದ್ದುಗುಂಡು ಕಂಡು ಹಿಡಿದವರು
ತಯಾರಿಸಿದವರು ಮಾರಿದವರು
ಕೊಂಡುಕೊಂಡವರು ಪ್ರಯೋಗಿಸಿದವರು
ಬದುಕ ಕಸಿದುಕೊಂಡವರು
ಬೀದಿಗೆ ತಂದವರು
ಎತ್ತಿ ಕಟ್ಟಿದವರು ಬತ್ತಿ ಇಡುತ್ತಿರುವವರು
ಒಬ್ಬೊಬ್ಬರೂ ನಮ್ಮ ಪಾಲಿಗೆ ಯಮದೂತರು!

(೨೦೨೩)

೮. ನನ್ನ ಮನೆ

ಇದು ಯುದ್ಧ ಭೂಮಿಯಲ್ಲ
ನನ್ನ ಮನೆ
ಬಯಲಿದು ಎಲ್ಲರಿಗೆ ತೆರೆದಿದೆ

ತಲೆಯ ಮೇಲೆ ಆಕಾಶವಿದೆ
ಆಕಾಶದಲ್ಲಿ ನಕ್ಷತ್ರಗಳಿವೆ
ಫಳಫಳ ಮಿನುಗಿ
ಭರವಸೆ ತುಂಬಿವೆ
ತಿಂಗಳ ಬೆಳಕು ಬದುಕ ಹಾರೈಸುತಿದೆ
ಇನ್ನೇನು ಬೇಕು ನನಗೆ?

ಹೆಂಡತಿ ಮಕ್ಕಳು ಇನ್ನೂ
ಉಸಿರಾಡುತ್ತಿರುವರು
ದೇವರ ಕರುಣೆ

ಚೂರಾಗಿ ಸಗ್ಗದ ಕಲ್ಪನೆ
ನರಕವೂ ಕ್ಷಣಿಕ ಎಂದು
ನಿರಾಳವಾಗಿದೆ ಮನ
ನಿನ್ನೆ ಇಂದು ನಾಳೆಗಳೆಲ್ಲ
ಕೇವಲ ಭಾವನೆ!

(೨೦೨೩)

೬. ಹೊಸಹುಟ್ಟು

ಯುದ್ಧ ಶುರುವಾದಾಗ
ಕೊಳದಲ್ಲಿ ತಾವರೆಯ
ಹೂವುಗಳು ಅರಳಿದ್ದವು

ಯುದ್ಧ ಮುಗಿದ ದಿನ
ಹೆಣಗಳು ತೇಲುತ್ತಿದ್ದವು

ಚರಮಗೀತೆ ನುಡಿಸಲೂ
ಮಂದಿ ಉಳಿದಿಲ್ಲ
ಎಲ್ಲವೂ ಹೊಸದಾಗಿ ಹುಟ್ಟಬೇಕು
ಮನುಜರೂ ....

(೨೦೨೩)

೧೦. ಯುದ್ಧವಾದರೆ.....

ರಾಜನ ಕೂದಲೇನೂ
ಕೊಂಕುವುದಿಲ್ಲ
ಪ್ರಜೆಗಳು ಲೆಕ್ಕಕ್ಕಿಲ್ಲ

ಮದ್ದುಗುಂಡುಗಳಿಗೆ
ತಹತಹ
ಸೈನಿಕರಿಗೆ ಕರ್ತವ್ಯ

ಅಧಿಕಾರಶಾಹಿಗೆ
ಪ್ರತಿಷ್ಠೆಯ ಪ್ರಶ್ನೆ
ಉದ್ಯಮಿಗಳಿಗೆ ಹಬ್ಬ

ಈ ಭೂಮಿಗೆ ಯುದ್ಧ
ನೋವು-ಸಾವು ತುಂಬಾ ಹಳತು

ಬದುಕ ಬೆಳಗಿಸಲು
ಹೊಸ ಅಸ್ತ್ರ-ಶಸ್ತ್ರಗಳೇನಾದರೂ
ಇವೆಯಾ ಹೇಳು.....

(೨೦೧೮)

೧೧. ಹೊಸಬಾಳು

ದ್ವೇಷ ಬಿತ್ತಿದವರು
ರೋಷ ಬಿತ್ತಿದವರು
ಅದಾಗಲೇ
ಹತರಾಗಿದ್ದಾರೆ ಗತರಾಗಿದ್ದಾರೆ
ನಾವೇಕೆ ಕತ್ತಿ ಬೀಸೋಣ
ನಾವೇಕೆ ಹಲ್ಲು ಮಸೆಯೋಣ
ಈ ಹಗೆಗೀಗ ಎಷ್ಟರ ಹರಯ?
ತಾಳು ...... ತಾನೇ ಸಾಯುವುದು
ಕೇಡು-ಸೇಡು ಮುದಿಯಾಗಿ
ಹೂಳಿದ ಮೇಲಷ್ಟೇ ಹೊಸಬಾಳು!

(೨೦೧೮)

೧೨. ಫಲಿತಾಂಶ

ಯುದ್ಧಕ್ಕೆ ಮುನ್ನ
ಒಂದಿಷ್ಟು ಮಂದಿ ಕ್ರೋಧಿತರು
ಒಂದಿಷ್ಟು ಮಂದಿ ಬೆಂಬಲಿಗರು
ಮಿಕ್ಕವರು ಬಾಧಿತರು

ಯುದ್ಧದ ನಂತರ ಗೆದ್ದವರಿಲ್ಲ
ಕಳಕೊಂಡವರೇ ಎಲ್ಲಾ
ಎಲ್ಲೆಲ್ಲೂ ವಿರೋಧ ಕ್ರೋಧ
ಹಾಲುಗಲ್ಲವೂ ಸನ್ನದ್ಧ ಯೋಧ!

(೨೦೨೩)

೧೩. ಶಾಂತಿ ಬಯಸಿ....

ಶಾಂತಿ ಬಯಸುವವರೆಲ್ಲ
ಸಭೆ ಸೇರಿದರು
ಶವದ ಪೆಟ್ಟಿಗೆಗಳ ಮೇಲೆ
ಕುಳಿತು ಠರಾವು ಮಂಡಿಸಿದರು

(೨೦೨೩)

೧೪. ವಿಜಯ ಸ್ತಂಭ

ಶವಗಳನೊಟ್ಟಿ
ಅದರ ಮೇಲೊಂದು
ಕಂಬ ನೆಟ್ಟಿಹರು

ಶವಗಳೇ ತಳಪಾಯ
ಆರ್ತನಾದವೇ ಜಯಘೋಷ !

(೨೦೨೩)

೧೫. ಹಾರೈಸುತ್ತಿತ್ತು

ಲೋಕವೆಲ್ಲ ಹತವಾದ ಮೇಲೆ
ಗತವಾದ ಮೇಲೆ
ತೊಟ್ಟಿಲೊಂದು ತಾನೆ ತೂಗುತ್ತಿತ್ತು
ಬಟ್ಟಲೊಂದು ಹಾಲು ಊಡುತ್ತಿತ್ತು
ದಿನದ ಮೊದಲ ಎಳೆಯ
ಸೂರ್ಯ ಕಿರಣ ಬೆಚ್ಚಗಿಟ್ಟು
ಬದುಕು ಹಾರೈಸುತ್ತಿತ್ತು

(೨೦೨೩)

೧೩. ಕಾದಾಟ

ಈ ಭೂಮಂಡಲದ
ಸಕಲ ಜೀವಿಗಳೂ ಕಾದಾಡುತ್ತವೆ

ಹಲ್ಲು ಉಗುರು ಕೊಂಬುಕೊಕ್ಕು
ಜೊಲ್ಲು ಬೆವರು
ಕೈಕಾಲು ಮಲಮೂತ್ರಗಳ
ಬಳಸಿ ಸೆಣೆಸಾಡುತ್ತವೆ

ಕೂಗುವುದೇನು ರೇಗುವುದೇನು
ಗುರುಗುಟ್ಟಿ ದುರುಗುಟ್ಟಿ
ಗದಗುಟ್ಟಿ ಅಟ್ಟಬಿಡುತ್ತವೆ

ಆದರೆ ಮನುಜನ ವರಸೆಯೇ ಬೇರೆ
ಕೋಲು ಕತ್ತಿ ಕೋವಿ ಫಿರಂಗಿ
ನೆಲಬಾಂಬು ಅಣುಬಾಂಬು
ರಾಸಾಯನಿಕ ಹಗೆ ಹೊಗೆಗಳು
ಅವನ ದರಿದ್ರ ಸಂಶೋಧನೆಗಳು

ಒಂದು ಗುಂಡಿ ಒತ್ತಿದರೆ ಸಾಕು
ಸಾವಿರ ಸಾವಿರ ಹೆಣಗಳು ಬೀಳುತ್ತವೆ
ಮತ್ತೆ ಸಾವಿರ ಸಾವಿರ ವರುಷಗಳು
ಬದುಕುಳಿದವ ಗುಂಡಿ ತೋಡುತ್ತಲೇ ಇರುತ್ತಾನೆ!

ಏನು ಹೇಳಲಿ! ಹೇಗೆ ಹೇಳಲಿ?
ಇಡೀ ಭೂಮಿ ಸಾಲದು ಹುಗಿಯಲು

(೨೦೨೩)

೧೭. ಕ್ಷಮಿಸಿ

ನಾನು ಹೇಳುತ್ತಿರುವುದು
ಸುಳ್ಳಾಗಿದ್ದರೆ ಕ್ಷಮಿಸಿ

ಬಾಂಬು ಸುರಿದರೆ
ಭೂಮಿ ಬರಡಾಗುವುದಿಲ್ಲವೆ?
ಅನ್ನ ವಿಷವಾಗುವುದಿಲ್ಲವೆ?

ಓ ಯೋಧನೇ
ಆಕಾಶದಿಂದ ಆಹಾರದ ಪೊಟ್ಟಣ
ಎಸೆದು ಹಸಿವು ನೀಗಿದ್ದೆ ನೀನು
ನಿನಗೆ ನಾನು ಋಣಿ

ನೀ ಸುರಿದ ಬಾಂಬುಗಳು
ದೇಶ ಸುಟ್ಟಿವೆಯೋ
ದ್ವೇಷ ಸುಟ್ಟಿವೆಯೋ ನಾನರಿಯೆ!

ಇರಲಿ..... ನೀನೆಸೆದ ಬಾಂಬೊಂದು
ದೊಡ್ಡ ಹೊಂಡ ತೋಡಿದೆಯಂತೆ
ಮುಂದಿನ ಮಳೆಗಾಲದಲಿ ಹೊಂಡದಲಿ
ನೀರು ತುಂಬಲಿ ದಾಹ ನೀಗಲಿ

(೨೦೧೮)

೧೮. ಬೇಡ ಯುದ್ಧ

ಅಂಬಿನಿಂದ ಅಣುಬಾಂಬಿನ ತನಕ
ಅರಮನೆಯಿಂದ ಸೆರೆಮನೆ ತನಕ
ನಾಶದ ಕತೆ ದ್ವೇಷದ ಕತೆ
ಎಲ್ಲಿಂದ ಶುರು ಮಾಡಲಿ?
ಹೇಗೆ ಮುಗಿಸಲಿ?

ದೊಡ್ಡಯಾದಿ ಕ್ರೂರವ್ಯಾಧಿ
ದುಃಖ ದುರ್ವಿಧಿ

ಬಂದೂಕು ಎತ್ತಿಕೊಳ್ಳುವ ಮೊದಲೇ
ಬಿಳಿಯ ಪಾರಿವಾಳಗಳು ಹಾರಿಬರಲಿ

ಗೋಡೆಗಳೂ ಏಳುವ ಮುನ್ನವೇ
ಸೇತುವೆ ಕಟ್ಟುವಂತಾಗಲಿ

(೨೦೧೮)

೧೯. ಯುದ್ಧ ಕೈದಿಗಳು

ಶೂರರೂ ಧೀರರೂ
ವೀರರೂ ಅಮಾಯಕರು
ಜಗದ ಸೆರೆಮನೆಗಳಲ್ಲಿ
ಕೊಳೆಯುತ್ತಿರುವವರು

ದೇಶಗಳೆದ್ದವು ಬಿದ್ದವು
ಗೆದ್ದರು ಸೋತರು ಸತ್ತರು
ರಾಜರು ಬಂದರು ಹೋದರು

ಹೆಂಡತಿ ಮಕ್ಕಳು ಅತ್ತರು
ಸಾಕ್ಷಿಗಳೆಂದೋ ಸತ್ತರು
ಜನರೂ ಮರೆತು ಬಿಟ್ಟರು!

(೨೦೧೮)

೨೦. ಬಿಳಿಯ ಪಾರಿವಾಳ

ನಾನೊಂದು ಬಿಳಿಯ ಪಾರಿವಾಳ
ಗಾಯಗೊಂಡಿರುವೆ ಗಡಿಯಾಚೆಯಿಂದ ಬಂದೆ

ನನ್ನ ಪರಿವಾರ ಯುದ್ಧ ಬಯಸುವುದಿಲ್ಲ
ಶಾಂತಿ ಸಂದೇಶ ಹೊತ್ತು ತಂದೆ

ಸಾವು ಬದುಕಿನ ನಡುವೆ ಜೀವ ತುಯ್ಯುತಿದೆ
ಕ್ಷಮೆ ಇರಲಿ ಸೆರೆ ಹಿಡಿದೆವು ತಿಳಿಯದೆ

ಮೊದಲು ಕಾಳು ನೀರಾಗಲಿ ಗಾಯ ಇನಿತಾದರೂ
ಮಾಯಲಿ ಕಳುಹಿ ಕೊಡುವೆವು ಮುಂದೆ....

(೨೦೧೮)

೨೧. ಏಕವಾಗಿ

ದ್ವೇಷವೆಂಬ ಬೆಂಕಿಯೊಂದು
ಏಕವಾಗಿ ಸುಟ್ಟಿತು

ದ್ವೇಷವೆಂಬ ಮಹಾಪೂರ
ಏಕವಾಗಿ ಸೆಳೆಯಿತು

ಬೆರೆಯಲಿಲ್ಲ ಪೊರೆಯಲಿಲ್ಲ
ಸಾಧಿಸಿದೆವು ಹಗೆಯನು

ಬಾಳಲಿಲ್ಲ ಬದುಕಲಿಲ್ಲ
ಮಸೆದೆವಲ್ಲ ಹಲ್ಲನು

ಮಾನವತೆಯ ಇರಿದುಕೊಂದು
ಏಕವಾಗಿ ಸತ್ತೆವು ಶೋಕವೇ
ಲೋಕವಾಗಿ ಮೂಕರಾಗಿ ಸತ್ತೆವು

(೨೦೧೮)

೨೨. ಬಾಂಬು

ಅಮ್ಮ.....
ನಾನು ನಾಲ್ಕು ಬಾಂಬು ಸಿಡಿಸಿದೆ
ಒಂದು ಇರುವೆ ಕೂಡ ಸಾಯಲಿಲ್ಲ!

ಕಂದಾ....
ಅದು ಇಲ್ಲಿಯದೋ ಅಲ್ಲಿಯದೋ
ಯಾರು ಮಾಡಿದ್ದು? ಯಾರು ಮಾರಿದ್ದು?

ಅಮ್ಮ.....
ಅದು ನೂರಕ್ಕೆ ನೂರು ಲೋಕಲ್
ನಾಡಬಾಂಬು!

ಹಾಗೇನು?
ಇರುವೆ ಇರಲಿ ಹುಲ್ಲುಗರಿಕೆ ಕೂಡ
ನೋಯಬಾರದು ಸಾಯಬಾರದು
ಆ ಬಾಂಬು ತಯಾರಿಸಿದವ
ಅತ್ಯಂತ ಮಾನವೀಯನೇ ಸೈ!

ಅಯ್ಯೋ......
ನನ್ನ ಕತೆ ಕೇಳು–
ಎಲ್ಲಾ 'ಠುಸ್' ಅಂದಿತಲ್ಲ?

ಮಗ.....
ನಮ್ಮ ಪೂರ್ವಿಕರು ಒಂದೇ ನದಿಯ ನೀರು
ಒಂದೇ ನೆಲದ ಅನ್ನ ತಿಂದು ಬೆಳೆದವರು
ಹಗೆ ಸಲ್ಲದು ಮಗ.....
ಟುಸ್ ಅನ್ನಬೇಕು ಕಚ್ಚಬಾರದು

(೨೦೨೧)

೨೩. ಕಣ್ಣ ಬೆಳಕು

ಬೀಸುವ ಕತ್ತಿಗಳೆದುರೇ
ಬಿತ್ತಿ ಬೆಳೆಯುತ್ತಿದ್ದೇವೆ
ಹಸಿರು ಹೊಲಗದ್ದೆಗಳನ್ನು

ರಾಜನ ಕಿರೀಟದ ವಜ್ರದ
ಹೊಳಪ ಮೀರಿಸಿದೆ
ಪುಟ್ಟ ಕುರಿಮರಿಯ ಕಣ್ಣ ಬೆಳಕು

(೨೦೨೩)

೨೪. ನುಡಿಯಲಿಲ್ಲ ನಾಲಗೆ

ಯುದ್ಧ ಹೇಗೆ ಆಯಿತು?
ಯುದ್ಧ ಯಾಕೆ ಆಯಿತು?
ಯುದ್ಧ ಏನು ನೀಡಿತು?
ಯುದ್ಧ ಎಂದು ಮುಗಿಯಿತು
ಗೊತ್ತಿಲ್ಲ ನನಗೆ....

ಶವದ ಪೆಟ್ಟಿಗೆ ಬಂತು ಮನೆಬಾಗಿಲಿಗೆ
'ಅಪ್ಪ' ಇದ್ದನಂತೆ ಅದರೊಳಗೆ
ಏನೂ ನೆನಪಿಲ್ಲ ನನಗೆ.....

ನಾನೂ ತೆಪ್ಪಗೆ ಬೆಪ್ಪಗೆ
ಬೆರಳು ಚೀಪುತ್ತಾ ನಿಂತಿದ್ದೆನಂತೆ
ಹಾಗಂತ ಅಜ್ಜಿ ಹೇಳಿದ್ದು
ಯಾವುದೂ ನೆನಪಿಲ್ಲ ನನಗೆ

ಅಪ್ಪನನ್ನು ಕಸಿದುಕೊಂಡಿತು ಯುದ್ಧ
ಅಪ್ಪನನ್ನು ಕರೆಯಲಿಲ್ಲ
ಅಪ್ಪನೆಂಬ ಶಬುದ ಮುಂದೆಂದೂ
ನುಡಿಯಲಿಲ್ಲ ನನ್ನೀ ನಾಲಗೆ

(೨೦೨೪)

೨೫. ಯುದ್ಧಕ್ಕೆ ಗುಡ್ ಬೈ

ಹೊಡೆದಾಡಲು
ಕೋಟಿ ಕೋಟಿ ಹಣ
ಖರ್ಚು ಮಾಡಬೇಕೆ?

ಕಾದಾಡಿ
ಕೋಟಿ ಕೋಟಿ ಜನ
ಜೀವ ತೆರಬೇಕೆ?

ದ್ವೇಷಿಸಲು ದಮನಿಸಲು
ದೊಡ್ಡ ದೊಡ್ಡ ಯೋಜನೆ
ಹಾಕಿಕೊಳ್ಳಬೇಕೆ?

ದವಸ ಧಾನ್ಯಗಳಂತೆ
ಮದ್ದು ಗುಂಡುಗಳನ್ನು
ಸಂಗ್ರಹಿಸಿ ಇಡಬೇಕೆ?

ಯಾಕೋ ಮನುಜರು
ಅನ್ನ ತಿನ್ನುವವರಂತೆ ಕಾಣುತ್ತಿಲ್ಲ
ಅವರಿಗೆ ಪ್ರಶ್ನೆಗಳಿಲ್ಲ
ಬದುಕಿಲ್ಲ ಸತ್ತಿಲ್ಲ!

(೨೦೧೫)

೨೭. ಯುದ್ಧ

ನಾನು ನನ್ನ ದೇಶದ ಗಡಿಯನ್ನು
ಕೊಳೆಯದ ಹೆಣಕ್ಕೆ ಹೋಲಿಸುತ್ತೇನೆ
ನಿತ್ಯ ಕಾವಲು ಕಾಯುವ ನೂರು
ಕಣ್ಣುಗಳಿಗಾಗಿ ದುಃಖಿಸುತ್ತೇನೆ

ಹಸಿರು ಉಸಿರಾಡದ ಮರಗಳಿಗಾಗಿ
ಗೂಡು ಕಟ್ಟದ ಹಕ್ಕಿಗಳಿಗಾಗಿ
ಬೇವನ್ನೇ ನೆಚ್ಚಿ ಸಾಯುವ ಕೋಗಿಲೆಗಳಿಗಾಗಿ
ದುಃಖಿಸುತ್ತೇನೆ

ನೀರವತೆಯಲ್ಲಿ ನರ್ತಿಸುವ
ಸದ್ದುಗಳ – ಆಕ್ರಂದನಗಳ
ಜುಗಲಬಂದಿ
ನನ್ನನ್ನು ಕಂಗೆಡಿಸುತ್ತದೆ.

ಕೆಂಪು ಸೂರ್ಯನನ್ನು ಹಣೆಗಿರಿಸಿಕೊಂಡು
ಹಳದಿ ಸೇವಂತಿಗೆಯನ್ನು ಮುಡಿಗಿರಿಸಿಕೊಂಡು
ನಿರೀಕ್ಷೆಯಲ್ಲಿ ನಲುಗಿಹೋಗುವ
ನೂರು ಹೆಣ್ಣುಗಳಿಗಾಗಿ ದುಃಖಿಸುತ್ತೇನೆ

ಬೆಳದಿಂಗಳ ರಾತ್ರಿಗಳನ್ನು
ಮಲ್ಲಿಗೆಯ ಹಗಲುಗಳನ್ನು
ಮುದ್ದಿಸಬೇಕಾದ ಕಣ್ಣುಗಳು
ಯಮನ ಕಣ್ಣುಗಳಲ್ಲಿ
ಮುಗುಳು ನಗುವುದು
ನನ್ನನ್ನು ಕಂಗೆಡಿಸುತ್ತದೆ
ಯುದ್ಧ ನನ್ನನ್ನು ಕಂಗೆಡಿಸುತ್ತದೆ
ಬುದ್ಧ ನನ್ನನ್ನು ಸಂತೈಸುತ್ತಾನೆ

(೧೯೮೭)

೨೭. ಕದನವಿರಾಮ

ಕತ್ತಿ ಬೀಸಲು ತ್ರಾಣವೇ ಇಲ್ಲ
ಉಸಿರೆತ್ತಲು ಪ್ರಾಣವೇ ಇಲ್ಲ
ಇದೀಗ ಯುದ್ಧ ವಿರಾಮ!

ಬನ್ನಿ ಕೂಡೋಣ
ಹಾಡೋಣ ಆಡೋಣ
ಗೆಲ್ಲುವುದು ಹೇಗೆ?
ಆಗಲಿ ಅವಲೋಕನ

ಸಲ್ಲಿಸೋಣ ಹುತಾತ್ಮರಿಗೆ
ನುಡಿನಮನ
ಸತ್ತ ಒಡಹುಟ್ಟುಗಳಿಗಾಗಿ
ಮರುಗೋಣ ಅಳೋಣ
ಉಳಿದುದನೆ ಸವಿಯೋಣ

ಘಾಸಿಗೊಂಡ ಮನಸಿಗೆ
ನೀಡಬೇಕು ಮರುಚೈತನ್ಯ
ಗಾಯಾಳುಗಳಿಗೆ ಮಲಾಮು
ನೋವುಗಳಿಗೆ ಸಾಂತ್ವನ

ಕುಸಿದವುಗಳನ್ನೆಲ್ಲಾ
ಎತ್ತಿ ನಿಲ್ಲಿಸಬೇಕು
ತುರ್ತಾಗಿ ಸೇತುವೆ ಕಟ್ಟಬೇಕು
ಸೋತವನು ಮತ್ತೆ ಮತ್ತೆ
ಪೂತ್ಕರಿಸುವನು ಹೋಗಲಿ
ಹೂಂಕರಿಸಿದವನಿಗಾಗಲಿ
ಇರುವುದೆ ನೆಮ್ಮದಿಯ ನಿದ್ದೆ?

ಕಟ್ಟಬೇಕು ಕೆಡವಿರುವುದನ್ನೆಲ್ಲ
ಕೈ ಜೋಡಿಸಬೇಕು
ಸಾರಿಸಿ ಗುಡಿಸಿ ಒರೆಸಿ ನಿರ್ಮಲವಾಗಿಸಿ
ಬೆಳಗಲು ದೀಪವ....

(೨೦೨೩)

೨೮. ಕರಗುವುದು ಕಲ್ಲೆದೆ

ಮುರಿದ ಕೈಕಾಲುಗಳನ್ನೂ ಸೀಳಿದ
ಗಂಟಲನ್ನೂ ಸುಟ್ಟ ಕಣ್ಣುಗಳನ್ನೂ
ಹೆಪ್ಪುಗಟ್ಟಿದ ರಕುತದ ಮುದ್ದೆಯನ್ನೂ
ಒಂದು ತಟ್ಟೆಯಲ್ಲಿ
ಜೋಡಿಸಿ ದೊರೆಗೆ ಒಪ್ಪಿಸಿದೆ

ದುಃಖಿತನಾದ ರಾಜ
ಯುದ್ಧವನ್ನೇನೋ ನಿಲ್ಲಿಸುವೆ
ನಮ್ಮನ್ನು ರಕ್ಷಿಸಿಕೊಳ್ಳುವುದು
ಹೇಗೆ ಎಂದು ಕೇಳಿದ ಗಳಿಗೆ

ಗಡಿಯಲ್ಲಿ ಸಾಲಾಗಿ
ಕವಿತೆಗಳ ನಿಲ್ಲಿಸಿದೆ
ನೆರೆಮನೆಯವನು ಖೂಳನೇ
ಇರಬಹುದು ಆದರೆ
ಕವಿತೆಗೆ ಗುಂಡಿಡುವಷ್ಟು
ಹೃದಯಹೀನನಲ್ಲ ಎಂದೆ

ನೆರೆಮನೆಯವನ ಸ್ತುತಿಸಿ
ಎರಡೂ ಕೈಗಳನ್ನೂ ಚಾಚಿ
ಕರೆಯಿತು ಕವಿತೆ
'ಬಾ' ಅಳೆಯೋಣ ರಕುತದ ಹೊಳೆ
ಅಳೆದು ಸುಸ್ತಾದ ಕೈಗೆ
ತೊಡಿಸುವೆ ಚಿನ್ನದ ಬಳೆ....

ಕವಿತೆಗೆ ವಿಶ್ವಾಸವಿದೆ
ಕರಗುವುದು ಕಲ್ಲೆದೆ!

(೨೦೨೩)

೨೯. ಚೌಕದಲ್ಲಿ ಕವಿತೆ

ಗಾಂಧಿ ಯಾಕೆ ಬೇಕು?
ಯಾಕೆಂದರೆ ನಾನು ಚೌಕದಲ್ಲಿ
ನಿಂತು ಯುದ್ಧ ವಿರೋಧಿ
ಕವಿತೆ ಓದಬೇಕು!

ಗಾಂಧಿ ಯಾಕೆ ಬೇಕು?
ಯಾಕೆಂದರೆ ನಾನು ಚೌಕದಲ್ಲಿ
ನಿಂತು ಓದುವ ಯುದ್ಧ ವಿರೋಧ
ಕವಿತೆ ನೀವು ಕೇಳಬೇಕು!

ನಿಜ ಕವಿತೆಗೆ ಗಟ್ಟಿಗುಂಡಿಗೆ ಬೇಕು
ಗುಂಡಿಗೆ ಎದೆಯೊಡ್ಡುವಷ್ಟು
ಛಲ-ಬಲ ಬೇಕು
ಅದಕೆ ಗಾಂಧಿ ಬೇಕು!

(೨೦೨೩)

೩೦. ಒಪ್ಪಂದ

ಹೂವು ಹಣ್ಣು ಬೆಳೆದು ಕೊಟ್ಟೆವು
ಸಿರಿಧಾನ್ಯಗಳ ಬೆಳೆದು ಕೊಟ್ಟೆವು
ಒಡವೆ ವಸ್ತ್ರ ಜೀವ ಉಳಿಸುವ
ಔಷಧಗಳ ತುಂಬಿಕೊಟ್ಟೆವು

ಪಡೆದದ್ದೇನು?
ಮದ್ದು ಗುಂಡು ಫಿರಂಗಿಗಳು
ಯುದ್ಧ ವಿಮಾನಗಳು
ಅಸ್ತ್ರ ಶಸ್ತ್ರಾಸ್ತ್ರಗಳು

ವೇಗಕ್ಕೆ ಸೋತೆವು
ಭೋಗಕ್ಕೆ ಸೋತೆವು
ನಡ ಬಗ್ಗಿಸಿದೆವು

ಎದೆ ಸೆಟಿಸಿ ನಿಲ್ಲುವುದು
ಅಷ್ಟು ಸುಲಭ ಅಲ್ಲ
ಅದು ತ್ಯಾಗವ ಬೇಡುವುದು
ಸಿದ್ಧನಾಗುವುದು ಬುದ್ಧನಾಗುವುದು
ಅಷ್ಟು ಸುಲಭ ಅಲ್ಲ
ಅದು ತ್ಯಾಗವ ಬೇಡುವುದು

೧೯.೦೨.೨೦೨೫

ಲೋಹಿಯಾ ಪ್ರಕಾಶನ

"ಕ್ಷಿತಿಜ" ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583 103.

☎ 08392-257412, 9900750549

ಒಟ್ಟು ಪ್ರಕಟಣೆಗಳು 194, ಲಭ್ಯವಿರುವವು 43

1.	ಲೋಹಿಯಾ	ಅನು: ಹಸನ್ ನಯೀಂ ಸುರಕೋಡ	200
2.	ಅಮೃತ ಮತ್ತು ವಿಷ	ರಂಜಾನ್ ದರ್ಗಾ	125
3.	ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ॥ ಎಂ.ಎಂ. ಕಲಬುರ್ಗಿ	30
4.	ಶಿವಾಜಿ ಮೂಲ ಕನ್ನಡ ನೆಲ	ಡಾ॥ ಸರಜೂ ಕಾಟ್ಕರ್	150
6.	ಕರ್ನಾಟಕ ಏಕೀಕರಣ	ಕೋ ಚೆನ್ನಬಸಪ್ಪ	60
7.	ನಾನು ಪಾಟೀಲ ಪುಟ್ಟಪ್ಪ (ಭಾಗ-1)	ನಿರೂಪಣೆ: ಡಾ॥ ಸರಜೂ ಕಾಟ್ಕರ್	250
8.	ನಾನು ಪಾಟೀಲ ಪುಟ್ಟಪ್ಪ (ಭಾಗ-2)	ನಿರೂಪಣೆ: ಡಾ॥ ಸರಜೂ ಕಾಟ್ಕರ್	250
9.	ಎರಡು ಕಿರು ನಾಟಕಗಳು	ಎಸ್. ಮಾಲತಿ	25
10.	ನೆನಪುಗಳು : ಚಂಪಾ ಲಿಮಯೆ	ಅನು: ಡಾ॥ ಸರಜೂ ಕಾಟ್ಕರ್ ಪ್ರೊ. ಎ.ಬಿ. ಘಾಟಗೆ	60
11.	ಅರ್ಥನೀತಿ	ಡಾ॥ ಹ. ಸೋಮಶೇಖರ	75
12.	ಸೌಹಾರ್ದ ಸೌರಭ	ರಂಜಾನ್ ದರ್ಗಾ	50
13.	ಇವರು ನಮ್ಮ ಜನರು	ನಾಡೋಜ ಡಾ. ಪಾಟೀಲ ಪುಟ್ಟಪ್ಪ	60
14.	ಗೊಂದಲಿಗ್ಯಾ	ಎ.ಎಂ. ಮದರಿ	200
15.	ಗಾಂಧಿಗೆ ಸಾವಿಲ್ಲ (ನಾಟಕ)	ಅನು: ಹಸನ್ ನಯೀಂ ಸುರಕೋಡ	50
16.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯ ಪೋಳ	100
17.	ಬಸವಪ್ರಜ್ಞೆ	ರಂಜಾನ್ ದರ್ಗಾ	15
18.	ಬಸವಣ್ಣನವರ ದೇವರು	ರಂಜಾನ್ ದರ್ಗಾ	15
19.	ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25
20.	ಬಸವ ಧರ್ಮದ ವಿಶ್ವ ಸಂದೇಶ	ರಂಜಾನ್ ದರ್ಗಾ	15
21.	ನಡೆ ನುಡಿ ಸಿದ್ಧಾಂತ	ರಂಜಾನ್ ದರ್ಗಾ	25
22.	ಜಾತಿ ವ್ಯವಸ್ಥೆಗೆ ಸವಾಲಾದ ಶರಣರು	ರಂಜಾನ್ ದರ್ಗಾ	30
23.	ಜಯದೇವಿತಾಯಿ ಲಿಗಾಡೆ	ಡಾ॥ ರಾಮಕೃಷ್ಣ ಮರಾಠೆ	45
24.	ಗಾಂಧಿಯೊಂದಿಗೆ ಒಬ್ಬ ನಾಸ್ತಿಕ	ಅನು: ವೆಂಕಟೇಶ ಮಾಚಕನೂರ	30
25.	ನನ್ನ ಬದುಕು	ಎ.ಎಸ್. ಹಿಪ್ಪರಗಿ	40
26.	ಮರಳುಗಾಡಿನ ಬೆಡಗು	ವೆಂಕಟೇಶ ಮಾಚಕನೂರ	100
27	ಅಪೂರ್ವ ಪೂರ್ವ	ವೆಂಕಟೇಶ ಮಾಚಕನೂರ	150
28.	ಗಾಂಧಿಕೃಷ್ಣರ ನಾಡಿನಲ್ಲಿ	ವೆಂಕಟೇಶ ಮಾಚಕನೂರ	100
29.	ಲಿಂಗಾಯತ ಹಿಂದೂ ಅಲ್ಲ ವೀರಶೈವವೂ ಅಲ್ಲ	ಡಾ॥ ಕೋ. ಚೆನ್ನಬಸಪ್ಪ	18
30	ಮಹಾತ್ಮಾಗಾಂಧಿ ರಾಮಮನೋಹರ ಲೋಹಿಯಾ ಕಂಡಂತೆ	ಅನು: ಬಿ.ಎ. ಸನದಿ	22
31.	ರಸಿಕ ರುದ್ರತಪಸ್ವಿ ಲೋಹಿಯಾ	ಸಂ: ಡಿ.ಎಸ್. ನಾಗಭೂಷಣ	51
32.	ಸಮಾಜವಾದದ ಸಾಲುದೀಪಗಳು	ಸಂ: ಡಿ.ಎಸ್. ನಾಗಭೂಷಣ	51
33.	ಹರನೆಂಬುದೇ ಸತ್ಯ...	ಕೃಷ್ಣಮೂರ್ತಿ ಹನೂರು	100
34.	ಕಡೇ ಮಾತು	ಸವಿತಾ ನಾಗಭೂಷಣ	.....
35.	ಸಮಗ್ರ ಕಥೆಗಳು	ಡಾ॥ ರಾಜಶೇಖರ ನೀರಮಾನ್ವಿ	200
36.	ಸ್ವತಂತ್ರ ಭಾರತದ ಅಶೋಕಚಕ್ರಧ್ವಜ	ಜೆ.ಪಿ.ರಾಜರತ್ನಂ	60
37.	ಕನ್ನಡ ಪ್ರೌಢ ವ್ಯಾಕರಣ	ಎ.ಎಸ್. ಹಿಪ್ಪರಗಿ	125
38.	ಛಂದೋವಾಹಿನಿ	ಎ.ಎಸ್. ಹಿಪ್ಪರಗಿ	125
39.	ಕರ್ಪೂರಿಠಾಕೂರ್ ಹಾಗೂ ಸಮಾಜವಾದ	ಅನು : ಹಸನ್ ನಯೀಂ ಸುರಕೋಡ	300
40.	ಅಪ್ಪಟ ಸಮಾಜವಾದಿ ಮಧು ಲಿಮಯೆ	ಮಂಗ್ಳೂರ ವಿಜಯ	45
41.	ಮಾನವತಾವಾದಿ ಮಧು ದಂಡವತೆ	ಡಾ. ಎನ್ ಜಗದೀಶ್ ಕೊಪ್ಪ	75
42.	ಶಿಕ್ಷಣದಲ್ಲಿ ಕನ್ನಡ ಮಾಧ್ಯಮ	ಸಂ : ವೆಂಕಟೇಶ ಮಾಚಕನೂರ	60
43.	ಯುದ್ಧವಿರೋಧಿ ಶಾಂತಿಗೀತೆಗಳು	ಸವಿತಾ ನಾಗಭೂಷಣ	30

ಕವನ ಸಂಕಲನಗಳು

ನಾ ಬರುತ್ತೇನೆ ಕೇಳು (1987)
ಚಂದ್ರನನ್ನು ಕರೆಯಿರಿ ಭೂಮಿಗೆ (1991)
ಹೊಳೆ ಮಗಳು (1996)

ಆಕಾಶ ಮಲ್ಲಿಗೆ

ಆಯ್ದ ನೂರು ಕವನಗಳು(2000)
ಜಾತ್ರೆಯಲ್ಲಿ ಶಿವ (2002)
ಕಾಡುಲಿಲ್ಲಿ ಹೂವುಗಳು:
ಈ ವರೆಗಿನ ಕವನಗಳು (2006)
ದರುಶನ (2009)

ಹಳ್ಳಿಯ ದಾರಿ

ಆಯ್ದ 50 ಕವನಗಳು (2011)
ಕರುಣಾಳು (2016)
ದೇವರಿಗೆ ಹೋದೆವು (2018)
ಕಡೇ ಮಾತು (ರೈತಗೀತೆ–2021)
ದಿನದ ಪ್ರಾರ್ಥನೆ (2024)

ಕಾದಂಬರಿ:

ಸ್ತ್ರೀ ಲೋಕ (1996 ಹಾಗೂ 2011)

ಲೇಖನಗಳ ಸಂಗ್ರಹ

ಹೂ ಮನಸ್ಸಿನ ಹೋರಾಟಗಾರ ಮತ್ತು
ಇತರ ಲೇಖನಗಳು (2011)

ಸಂಪಾದಿತ ಕೃತಿ:

ಮುಡಿ ಮಲ್ಲಿಗೆ (ಮಹಿಳಾ ಸಾಹಿತ್ಯ ಸ್ಪಂದನ–1992)
ಕವಿತೆ 1997 (ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ)

ಕತೆಗಳು:

ಅಜ್ಜಿ ಕರೆದ ಹಾಗಾಯ್ತು (2022)

ಸಹ ಸಂಪಾದನೆ:

ಹಣತೆ (ಜಿ.ಎಸ್.ಎಸ್. ಅಭಿನಂದನ ಗ್ರಂಥ)
ಸುವರ್ಣ ಕಾವ್ಯ (ಸುವರ್ಣ ಕರ್ನಾಟಕ ಕಾವ್ಯ ಸಂಪುಟ 2006)
ಇರುವಂತಿಗೆ (ವೈದೇಹಿ ಗೌರವ ಗ್ರಂಥ)

ಕೆಲವು ಪ್ರಮುಖ ಪುರಸ್ಕಾರಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (2014)
ಡಿ.ಎಸ್. ಕರ್ಕಿ ಕಾವ್ಯ ಪುರಸ್ಕಾರ
ಪು.ತಿ.ನ. ಕಾವ್ಯ ಪ್ರಶಸ್ತಿ
ಮಾಸ್ತಿ ಕಾವ್ಯ ಪುರಸ್ಕಾರ
ಮಧುರ ಚೆನ್ನ ಕಾವ್ಯ ಪುರಸ್ಕಾರ
ಕೆ.ಎಸ್.ನ. ಕಾವ್ಯ ಪುರಸ್ಕಾರ
ಕಿ.ರಂ. ಕಾವ್ಯ ಪುರಸ್ಕಾರ
ಕನ್ನಡ ಸಾಹಿತ್ಯ ಪರಿಷತ್‌ನ ಮನುಶ್ರೀ ರಾಷ್ಟ್ರೀಯ ಪ್ರಶಸ್ತಿ
ಎಂ.ಕೆ. ಇಂದಿರಾ ಪ್ರಶಸ್ತಿ
ಬಿ.ಹೆಚ್. ಶ್ರೀಧರ ಸಾಹಿತ್ಯ ಪ್ರಶಸ್ತಿ

ಯುದ್ಧ ವಿರೋಧಿ
ಶಾಂತಿ ಗೀತೆಗಳು

ನುಡಿಯಲಿಲ್ಲ ನಾಲಿಗೆ

ಯುದ್ಧ ಹೇಗೆ ಆಯಿತು?
ಯುದ್ಧಯಾಕೆಆಯಿತು?
ಯುದ್ಧ ಏನು ನೀಡಿತು?
ಯುದ್ಧಎಂದು ಮುಗಿಯಿತು
ಗೊತ್ತಿಲ್ಲ ನನಗೆ....

ಶವದ ಪೆಟ್ಟಿಗೆ ಬಂತು ಮನೆಬಾಗಿಲಿಗೆ
'ಅಪ್ಪ' ಇದ್ದನಂತೆ ಅದರೊಳಗೆ
ಏನೂ ನೆನಪಿಲ್ಲ ನನಗೆ.....

ನಾನೂ ತೆಪ್ಪಗೆ ಬೆಪ್ಪಗೆ
ಬೆರಳು ಚೀಪುತ್ತಾ ನಿಂತಿದ್ದೆನಂತೆ
ಹಾಗಂತಅಜ್ಜಿ ಹೇಳಿದ್ದು
ಯಾವುದೂ ನೆನಪಿಲ್ಲ ನನಗೆ

ಅಪ್ಪನನ್ನು ಕಸಿದುಕೊಂಡಿತು ಯುದ್ಧ
ಅಪ್ಪನನ್ನುಕರೆಯಲಿಲ್ಲ
ಅಪ್ಪನೆಂಬ ಶಬುದ ಮುಂದೆಂದೂ
ನುಡಿಯಲಿಲ್ಲ ನನ್ನೀ ನಾಲಗೆ

ಲೋಹಿಯಾ ಪ್ರಕಾಶನ, ಬಳ್ಳಾರಿ

ISBN 978-81-8113-170-6

₹ 30.00/-